ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,

ರಾಮನಗರಜಿಲ್ಲಾ ನ್ಯಾಯಾಲಯ ಸಂಕೀರ್ಣ, ರಾಮನಗರ – 562 159.
DISTRICT LEGAL SERVICES AUTHORITY, RAMANAGARA.
District Court Complex, Ramanagara- 562 159, Phone: 080-27273445
E-mail ID: dlsaramanagara@gmail.com & msdlsaramanagara@gmail.com

ಸಂಖ್ಯೆ: ಜಿ.ಕಾ.ಸೇ.ಪ್ರಾ.ರಾ/ 61 /2025-26 **ದಿನಾಂಕ: 17.04.2025**

ಪ್ರಕಟಣೆ

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಮನಗರ ಮತ್ತು ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಾದ ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ಕಛೇರಿಗಳಿಗೆ ಪ್ಯಾನಲ್ ವಕೀಲರುಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ: 1) ಗೌರವಾನ್ವಿತ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರ ಪತ್ರ ಸಂಖ್ಯೆ 01/ಪ್ಯಾನಲ್ ಅಡ್ವೊಕೇಟ್ಸ್/2025/596, ದಿನಾಂಕ:09.04.2025,

2) KSLSA:03/Legal Aid/2022/386/2022, Dated: 09.02.2022.

3) KSLSA:03/Legal Aid/2022/1541/2022, Dated: 30.06.2022.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಮನಗರ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ಕಛೇರಿಗಳಿಗೆ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ(ಉಚಿತ ಮತ್ತು ಸಕ್ಷಮ ಕಾನೂನು ಸೇವೆಗಳು) ನಿಯಮ, 2010 ನಿಯಮ 6ರಂತೆ ಪ್ಯಾನಲ್ ವಕೀಲರ ಪಟ್ಟಿಯನ್ನು ಪ್ರತಿ ಮೂರು (03) ವರ್ಷಗಳಿಗೊಮ್ಮೆ ನವೀಕರಣಗೊಳಿಸಬೇಕಾಗಿದ್ದು, ಅದರಂತೆ ಜಿಲ್ಲಾ ಮತ್ತು ತಾಲ್ಲೂಕು ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಕಾನೂನು ನೆರವು ನೀಡಲಾಗುವ ಪ್ರಕರಣಗಳಲ್ಲಿ ರೀಟೈನರ್ ಪ್ರಂಟ್ ಆಫೀಸ್ (ನ್ಯಾಯಾಲಯ ಆವರಣ), ರಿಮ್ಯಾಂಡ್ ಮತ್ತು ಡ್ಯೂಟಿ ವಕೀಲರಾಗಿ ಹಾಜರಾಗಲು, ಪೊಲೀಸ್ ಠಾಣಾ ಚಿಕಿತ್ಸಾಲಯಗಳಿಗೆ, ತಹಶೀಲ್ದಾರ ಕಛೇರಿ, ಸಿ.ಡಿ.ಪಿ.ಓ. ಕಛೇರಿ, ಕಾರಾಗೃಹ, ಬಾಲ ನ್ಯಾಯ ಮಂಡಳಿ, ಗ್ರಾಮೀಣ ಕಾನೂನು ನೆರವು ಮತ್ತು ಸಲಹಾ ಕೇಂದ್ರ ಹಾಗೂ ಎ.ಆರ್.ಟಿ. ಕೇಂದ್ರಗಳಲ್ಲಿನ ಕಾನೂನು ಸಲಹಾ ಕೇಂದ್ರಗಳಿಗೆ ಭೇಟಿ ನೀಡಿ ಕಾನೂನು ಸಲಹೆ ನೀಡಲು ಕಾನೂನು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಹೊಸದಾಗಿ ಪ್ಯಾನಲ್ ವಕೀಲರನ್ನು ಆಯ್ಕೆ ಮಾಡಬೇಕಾಗಿರುತ್ತದೆ.

ಜಿಲ್ಲೆ/ತಾಲ್ಲೂಕುವಾರು ಈ ಕೆಳಗೆ ನಮೂದಿಸಿದ ಷರತ್ತುಗಳಂತೆ ಅರ್ಹ ವಕೀಲರು **ದಿನಾಂಕ:17.04.2025 ರಿಂದ ದಿನಾಂಕ: 02.05.2025ರ ಸಂಜೆ: 5.30ಗಂಟೆಯವರೆಗೆ** ನಿಗಧಿತ ನಮೂನೆಯಲ್ಲಿ ತಮ್ಮ ಪೂರ್ಣ ವಿವರಗಳೊಂದಿಗೆ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಮನಗರ ಇವರಿಗೆ ಆಫ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೋರಲಾಗಿದೆ. ನಿಗಧಿತ ಸಮಯದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಮಾರ್ಗಸೂಚಿ:

1. ವಕೀಲ ವೃತ್ತಿಯಲ್ಲಿ ಕನಿಷ್ಠ 3ವರ್ಷ ಅನುಭವ ಹೊಂದಿರಬೇಕು.
2. ವಕೀಲರ ಸಂಘದ ಸದಸ್ಯತ್ವ ಪಡೆದುಕೊಂಡ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು.
3. ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳನ್ನು ತಿಳಿದಿರಬೇಕು.

ಗೌರವಾನ್ವಿತ ಅಧ್ಯಕ್ಷರ ಆದೇಶದ ಮೇರೆಗೆ,
Sd/-
(ಸವಿತ.ಪಿ.ಆರ್)
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಮನಗರ.

ಇವರಿಗೆ:

ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಜಿಲ್ಲಾ ನ್ಯಾಯಾಲಯದ ಆವರಣ
ರಾಮನಗರ.

ಇತ್ತೀಚಿನ
ಭಾವಚಿತ್ರ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಡಿ ಪ್ಯಾನಲ್ ವಕೀಲರುಗಳ ನೇಮಕಾತಿಗಾಗಿ ಅರ್ಜಿ

1	ಅರ್ಜಿದಾರರ ಹೆಸರು	
2	ತಂದೆ /ತಾಯಿಯ ಹೆಸರು	
3	ಹುಟ್ಟಿದ ದಿನಾಂಕ ಮತ್ತು ವಯಸ್ಸು	
4	ವಿಳಾಸ ಅ) ಖಾಯಂ ವಿಳಾಸ ಆ) ಕಚೇರಿ ವಿಳಾಸ	
5	ದೂರವಾಣಿ ಸಂಖ್ಯೆ	
	ಮೊಬೈಲ್ ಸಂಖ್ಯೆ ವಾಟ್ಸಪ್ ಸಹಿತ ಮೊಬೈಲ್ ಸಂಖ್ಯೆ	
6	ಈ ಮೇಲ್ ವಿಳಾಸ	
7	ವಿದ್ಯಾರ್ಹತೆ	
8	ಎನ್ರೋಲಮೆಂಟ್ ನಂಬರ್ : ಕರ್ನಾಟಕ ಬಾರ್ ಕೌನ್ಸಿಲನಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸಬೇಕು	
9	ವಕೀಲ ವೃತ್ತಿಯ ಅನುಭವ : ಯಾವ ವಿಭಾಗದಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿರುತ್ತಾರೆ- ಈ ಬಗ್ಗೆ ಮಾಹಿತಿ	
10	ಜಾತಿ : (ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದಲ್ಲಿ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು)	
11	ಭಾಷೆಗಳು :	ಅ) ಓದಲು ಆ) ಬರೆಯಲು ಇ) ಮಾತನಾಡಲು 1. 1. 1. 2. 2. 2. 3. 3. 3.

ಸ್ಥಳ :
ದಿನಾಂಕ :

ಅಭ್ಯರ್ಥಿಯ ಸಹಿ

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು:

1. ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಛಾಯಾಪ್ರತಿ.
   [SSLC Marks card Xerox Copy]
2. ಕರ್ನಾಟಕ ಬಾರ್ ಕೌನ್ಸಿಲ್ ನಿಂದ ಪಡೆದ ಪ್ರಮಾಣ ಪತ್ರ ಛಾಯಾಪ್ರತಿ
   [Enrollment Certificate Xerox Copy]
3. ಜಿಲ್ಲಾ/ತಾಲ್ಲೂಕು ವಕೀಲರ ಸಂಘದ ಸದಸ್ಯತ್ವ ದೃಡೀಕರಣ ಪತ್ರದ ಛಾಯಾಪ್ರತಿ
   [Bar Association Membership Certificate Xerox Copy]
4. ಆಧಾರ್ ಕಾರ್ಡ್ ನ ಛಾಯಪ್ರತಿ.
   [Aadhar card Xerox Copy]

Sd/-
Member Secretary,
DLSA, Ramanagara.